ಕಳಿಸಿದ್ದೇವೆ. ಬಿಪಿಎಲ್ ಪುನರ್ ಪರಿಶೀಲನೆ ಆ ಜನರಿಗೆ ಸಿಗುತ್ತಿಲ್ಲ. ಎರಡು ಕಾಫಿ ಗಿಡಗಳನ್ನು ಹಾಕಿದರೆ ಸಾಕು ಅದನ್ನೇ ಆಧಾರವಾಗಿ ತೆಗೆದುಕೊಂಡು ಅರ್ಜಿಯನ್ನು ರಿಜೆಕ್ಟ್ ಮಾಡುತ್ತಿದ್ದಾರೆ. ಆದರೆ ದೊಡ್ಡ ದೊಡ್ಡ ಪ್ಲಾಂಟರ್ಸ್ ಬೇಕಾದಷ್ಟು ಮಾಡಿಕೊಂಡು ಏನು ಬೇಕಾದರೂ ಮಾಡುತ್ತಿರುವಾಗ ಬರೀ 4-5 ಎಕರೆಗಿಂತ ಕಡಿಮೆ ಭೂಮಿಯನ್ನು ಇಟ್ಟುಕೊಂಡಿರತಕ್ಕ ಬಡವರು, ಹರಿಜನ ಗಿರಿಜನರು 2-3 ಕಾಫಿ ಗಿಡಗಳನ್ನು ಹಾಕಿದ್ದರೆ ಅದನ್ನು ಪ್ಲಾಂಟೇಷನ್ ಎಂದು ತೀರ್ಮಾನ ಮಾಡಿಕೊಂಡು ಅವರ ಅರ್ಜಿಯನ್ನು ರಿಜೆಕ್ಟ್ ಮಾಡುತ್ತಿದ್ದಾರೆ. ತಾನು ಉತ್ತರದಲ್ಲಿ ಇದನ್ನು ಪುನಃ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೀರಿ. ದಯಮಾಡಿ ಸನ್ಮಾನ್ಯ ಕಂದಾಯ ಮಂತ್ರಿಗಳಲ್ಲಿ ಈ ವಿಷಯವನ್ನು ಪುನರ್‌ನಿರ್ಮರ್ಶೆ ಮಾಡಿ ಯಾರು 5 ಎಕರೆಗಳಿಗಿಂತ ಕಡಿಮೆ ಹೊಂದಿರುವವರೋ ಅಂಥ ಬಡಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ಅದನ್ನು ಎಗ್ಸಮ್ಪ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ಮಾಡಲು ಸಾಧ್ಯವೊ ಎನ್ನುವ ಬಗ್ಗೆ ಕೇಳುತ್ತಿದ್ದೇನೆ.

SRI M. RAJASHEKARA MURTHY:- Honourable members, suggestion will be examined.

ಮಾಲೂರು ತಾಲ್ಲೂಕಿನ ವ್ಯವಸಾಯ ಸಹಕಾರ ಸಂಘದ ಹಾಲುದಾರರ ವ್ಯಾಪ್ತಿಗೆ ಸೇರಿದ ಸ್ಥಳ

123 (720): ಶ್ರೀ ಎ. ನಾಗರಾಜು (ಮಾಲೂರು)

ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು ತುರುಣಿಸಿ ಸೇವಾ ಸಹಕಾರ ಸಂಘದ ಕಾರ್ಯ ವ್ಯಾಪ್ತಿಗೆ ಸೇರದೆ ಇರುವ ಸ್ಥಳದ ಜನರನ್ನು ಸಂಘದ ಸದಸ್ಯರನ್ನಾಗಿ ಸೇರಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವಶ್ಯಗಳನ್ನು ಮತದಾರರ ಪಟ್ಟಿಯಿಂದ ತೆಗೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಇ) ಸಂಘದ ಚುನಾವಣೆಯನ್ನು ಸರ್ಕಾರವು ಯಾವಾಗ ನಡೆಸಲಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಬಂದಿದೆ.

ಆ) ಸಂಘದ ಕಾರ್ಯ ವ್ಯಾಪ್ತಿಗೆ ಸೇರದೆ ಇರುವ ಸ್ಥಳದ ಜನರನ್ನು ಸಂಘದ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗಿದೆ ಎಂದು ಆರೋಪಿಸಿ ಸಂಘದ ಸದಸ್ಯರಿಂದ ಬಂದಿದ್ದ ದೂರಿನ ಮೇರೆಗೆ ಕೋಲಾರ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು 1959ನೇ ಸಹಕಾರ ಸಂಘಗಳ ಕಾಯ್ದೆ ಕಲಂ 65 ರ ಪ್ರಕಾರ ಪರಿಶೀಲನೆ ನಡೆಸಲು ದಿನಾಂಕ: 06-02-1993 ರಲ್ಲಿ ಆದೇಶಿಸಿ, ಸಹಕಾರ ಅನಿವೃತ್ತಿ ಅಧಿಕಾರಿ, ಮಾಲೂರು, ಇವರನ್ನು ಪರಿಶೀಲನಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಇವರಿಂದ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಸಂಘದ ಕಾರ್ಯ ವ್ಯಾಪ್ತಿಯಿಂದ ಹೊರಗಿನವರನ್ನು ಸದಸ್ಯರನ್ನಾಗುವ ನೋಂದಾಯಿಸಿದ ಸಮಸ್ಯೆ ಪರಿಹಾರವಾದ ನಂತರ ಕಾರ್ಯಕಾರಿ ಮಂಡಳಿಗೆ ಚುನಾವಣೆಗಳನ್ನು ನಡೆಸಲು ಸಂಘಕ್ಕೆ ಸೂಕ್ತ ನಿರ್ದೇಶನ ನೀಡಲಾಗುವುದು.

ಶ್ರೀ ಎ. ನಾಗರಾಜು:– ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ತುರುಣಸಿ ಸೇವಾ ಸಹಕಾರ ಸಂಘ ಇದೆ. ಅಲ್ಲಿ ಜ್ಯೂರಿಸ್‌ಡಿಕ್‌ಶನ್‌ಗೆ ಹೊರಪಟ್ಟು ಸದಸ್ಯರನ್ನು ನೋಂದಾವಣೆ ಮಾಡಿ ಚುನಾವಣೆಯಲ್ಲಿ ಬಹಳ ತಾರತಮ್ಯವಾಗುತ್ತಿದೆ. ಈಗ ಸನ್ಮಾನ್ಯ ಸಚಿವರು ಜ್ಯೂರಿಸ್‌ಡಿಕ್‌ಶನ್‌ಗೆ ಒಳಪಡದ ಸದಸ್ಯರ್ಯಾರು ನೋಂದಾವಣೆ ಮಾಡಿದ್ದಾರೆ ಅವರೆಲ್ಲರನ್ನೂ ತೆಗೆಸಿ ನಿಷ್ಪಕ್ಷಪಾತವಾಗಿ ಚುನಾವಣೆಯನ್ನು ನಡೆಸುತ್ತೀರ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಆ ಕ್ಷೇತ್ರದ ತುರುಣಸಿ ಸೇವಾ ಸಹಕಾರ ಸಂಘದಲ್ಲಿ ಸುಮಾರು 189 ಜನ ಸದಸ್ಯರುಗಳು ಜ್ಯೂರಿಸ್‌ಡಿಕ್‌ಷನ್‌ಗೆ ಒಳಪಡದವರನ್ನು ಸದಸ್ಯರುಗಳಾಗಿ ಎನ್‌ರೋಲ್ ಮಾಡಿದ್ದಾರೆ ಎನ್ನುವಂತಹ ಆಪಾದನೆ ಬಂದಿದೆ. ಅದರ ಪ್ರಕಾರವಾಗಿ ಅದನ್ನು ವಿಚಾರಣೆ ಮಾಡುವುದಕ್ಕಾಗಿ ಕೋ–ಆಪರೇಟಿವ್ ಡೆವಲಪ್‌ಮೆಂಟ್ ಆಫೀಸರನ್ನು ನೇಮಕ ಮಾಡಿದ್ದೇವೆ. ಅವರ ತಪಾಸಣೆಯ ವರದಿಯು ಬಂದ ನಂತರ ಯಾರ್ಯಾರು ಈ ರೀತಿಯಾಗಿ ಜ್ಯೂರಿಸ್‌ಡಿಕ್‌ಶನ್‌ಗೆ ಒಳಪಡದ ಸದಸ್ಯರುಗಳಿದ್ದಾರೋ ಅವರನ್ನು ತೆಗೆದು ಹಾಕಿ ಚುನಾವಣೆಯನ್ನು ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಚುಪ್ರ. 254 ತೋಟಗಾರಿಕೆ ಮಂತ್ರಿಗಳಿಗೆ ಸಂಬಂಧಪಟ್ಟಿದ್ದುದು. ಅವರು ಈಗ ಇಲ್ಲದಿರುವುದರಿಂದ ಇದನ್ನು ಕೊನೆಯಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು:– ನಮ್ಮ ಪ್ರಶ್ನೆಗಳನ್ನು ತೆಗೆದುಕೊಂಡಾಗ ಸಚಿವರುಗಳೇ ಬರುವುದಿಲ್ಲ. ಪ್ರತಿ ಸಾರಿಯೂ ಹೀಗೇ ಆಗುತ್ತಿರುತ್ತದೆ. ಈ ವಿಧಿವೇಶನದಲ್ಲಿ ನೋಡಿದ್ದೇನೆ. ಬರೀ ಗೈರು ಹಾಜರಿರುತ್ತಾರೆ. ಅಲ್ಲಿ ನಮ್ಮ ಕೆಲಸವಾಗುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ತಾಪ್ರ ನಮ್ಮ ರಕ್ಷಣೆಗೆ ಬರಬೇಕು. ಬೇರೆ ದಿನಸಬಲ್ಲಿ ನಮ್ಮನ್ನು ಕರೆಯುವುದಿಲ್ಲ. ಬಂದ ಪ್ರಶ್ನೆಗೆ ಮಂತ್ರಿಗಳು ಇರುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ಪ್ರಶ್ನೋತ್ತರ ಕಾಲದಲ್ಲಿ ಮಂತ್ರಿಗಳ ಗೈರುಹಾಜರಿಯನ್ನು ತಾವು ತೀವ್ರವಾಗಿ ಪರಿಗಣಿಸಬೇಕು. ಮತ್ತು ಅವರಿಗೆ ತೀವ್ರವಾದ ಎಚ್ಚರಿಕೆಯನ್ನೂ ಕೂಡ ಕೊಡಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ಬಹಳ ನೋವಿನಿಂದ ನಾವು ಹೇಳಬೇಕಾಗಿದೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಪ್ರತಿದಿನ ಹೀಗೆಯೇ ಆಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸ್ವಾಮಿ, ಹೊಸದಾಗಿ ಮಂತ್ರಿಗಳಾಗಿರುವವರೇ ಈ ರೀತಿ ಮಾಡಿದರೆ ಹೇಗೆ ?

ಅಧ್ಯಕ್ಷರು:– ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು -- ಕೊಡುತ್ತಿದ್ದೇನೆ. ಸದನದಲ್ಲಿ ಪ್ರಶ್ನೋತ್ತರಕಾಲ ಮಹತ್ತರವಾದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಹಾಜರಿರಲೇಬೇಕೆಂದು ನಾನು ಕಡ್ಡಾಯವಾಗಿ ಹೇಳುತ್ತೇನೆ. ಇಲ್ಲದಿದ್ದರೆ ಮುಂದೆ ನಾನು ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಈಗ ನನ್ನ ಸ್ಥಿತಿ ಏನು ಸ್ವಾಮಿ ? ನನ್ನ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು:- ಇವುಗಳ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ನೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ಮನವಿ ಇದೆ. ನಮ್ಮ ಹೆಸರಿನಲ್ಲಿ ಬಂದು ಪ್ರಶ್ನೆ ಇದ್ದು ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗಿರುತ್ತದೆ. ಇವರೆ ಅದು ಬೇರೆ ಮಂತ್ರಿಗಳಿಗೆ ಸೆಕ್ರೆಟರಿಯವರ ಟೇಬಲ್‌ನಲ್ಲೇ ಟ್ರಾನ್ಸ್‌ಫರ್ ಆಗಿರುತ್ತದೆ. ನಾವು ಸದನಕ್ಕೆ ಬಂದಮೇಲೆ ಇದು ಗೊತ್ತಾಗುತ್ತದೆ. ಮಂತ್ರಿಗಳು ಉತ್ತರ ಕೊಟ್ಟಿಲ್ಲವೆಂಬ ಒಂದು ಅಭಿಪ್ರಾಯ ಬರುತ್ತದೆ ಈ ಕ್ರಮವನ್ನು ಏನಾದರೂ ಸರಿಪಡಿಸುತ್ತೀರಾ ? ಏಕೆಂದರೆ ನಾವು ಇಲ್ಲಿಗೆ ಬಂದ ಮೇಲೆ ಈ ಪ್ರಶ್ನೆಯನ್ನು ಇಂಥಾ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ ಎಂದು ನೋಟ್ಸ್ ಕೊಡುತ್ತಾರೆ. ಇದು ತಮಗೂ ಗೊತ್ತಿರುವುದಿಲ್ಲ.

ಅಧ್ಯಕ್ಷರು:- ಅದನ್ನು ನಾನು ಸರಿಪಡಿಸುತ್ತೇನೆ.

ಶಹಾಪುರ ತಾಲ್ಲೂಕಿನ ಕೆಂಭಾವಿ ಉಪಮಾರುಕಟ್ಟೆಗೆ ಭೂಸ್ವಾಧೀನ

126 (1032): ಶ್ರೀ ಶಿವಶೇಖರನ್ನಗೌಡ ಪಿರಮಾಳ್ (ಶಹಾಪುರ)

ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನ ಸಗರ-ಗೋಗಿ, ಸುರಪುರ ತಾಲ್ಲೂಕಿನ ಕೆಂಭಾವಿ ಉಪಮಾರುಕಟ್ಟೆಗಳಿಗಾಗಿ ಸರ್ಕಾರದವರು ಭೂಸ್ವಾಧೀನಪಡಿಸಿಕೊಂಡಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ, ಉಪಮಾರುಕಟ್ಟೆಗಳನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದು ?

ಇ) ಯಾವ್ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗುವುದು ?

ಈ) ಇದಕ್ಕಾಗಿ ಎಷ್ಟು ಹಣ ನಿಗಧಿಪಡಿಸಲಾಗಿದೆ ?

ಉ) ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಮದನ್ ಗೋಪಾಲ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯಸಚಿವರು).

ಅ) ನಿಜ

ಆ) ಸಗರ ಮತ್ತು ಗೋಗಿ ಉಪಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿಗಾಗಿ ಸಹಾಯ ಧನ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಕೆಂಭಾವಿ ಉಪಮಾರುಕಟ್ಟೆಯನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ.

ಇ) ಗೋಗಿ ಮತ್ತು ಸಗರ ಉಪಮಾರುಕಟ್ಟೆ ಪ್ರಾಂಗಣಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

<u>ಗೋಗಿ ಮತ್ತು ಸಗರ</u>

1) ಕಚೇರಿ ಕಟ್ಟಡ
2) ಕೊಳವೆ ಬಾವಿ
3) ಒಳರಸ್ತೆಗಳು
4) ತಾತ್ಕಾ ಚೀಲಿ ಮತ್ತು ಗೇಟುಗಳು